ಶಾಲೆಯಲ್ಲಿ ಪ್ರಜೆಗಳು | ಪರಿಪಾಠ ಮತ್ತು ಪರ್ಯಾಲೋಚನೆ

ಅನಿಲ್ ಔಷಾ ಮತ್ತು ಸಂಜಯ್ ಡೇನಿಯಲ್

'ಭಾರತವನ್ನು ಎಲ್ಲಿಯವರೆಗೆ ಒಗ್ಗೂಡಿಸಲು ಸಾಧ್ಯವಿಲ್ಲವೋ ಅಲ್ಲಿಯವರೆಗೆ ಅದೊಂದು ರಾಷ್ಟ್ರವಾಗಲು ಸಾಧ್ಯವಿಲ್ಲ' – ಹೀಗೆಂದು ಆಧುನಿಕ ಭಾರತದ ನಿರ್ಮಾತೃಗಳಾದ ಬಾಬಾ ಸಾಹೇಬ್ ಅಂಬೇಡ್ಕರ್ ಮತ್ತು ರವೀಂದ್ರನಾಥ್ ಟಾಗೋರ್ ಅವರಂಥವರು ಬಲವಾಗಿ ನಂಬಿದ್ದರು. ಇನ್ನೊಂದು ಅರ್ಥದಲ್ಲಿ ಹೇಳಬೇಕೆಂದರೆ ಭಾರತವು ನಿರ್ಮಾಣ ಹಂತದಲ್ಲಿರುವ ರಾಷ್ಟ್ರ ಎಂಬುದು ಅವರ ನಂಬಿಕೆಯಾಗಿತ್ತು. ಇದರ ನಿಜಾರ್ಥವೇನೆಂದರೆ ರಾಷ್ಟ್ರಗಳೆಂದರೆ ಕೇವಲ ಭೌಗೋಳಿಕವಾದ ಗಡಿಗಳಿಂದ, ಕಾವಲು ನಿಂತಿರುವ ಸೇನೆಗಳಿಂದ ಅಥವಾ ಚುನಾಯಿತ ಪ್ರತಿನಿಧಿಗಳಿಂದ ರೂಪುಗೊಂಡಿರುವುದಲ್ಲ. ಬದಲಾಗಿ ಅದು ರೂಪುಗೊಂಡಿರುವುದು ಪ್ರಜೆಗಳಿಂದ: ತಮ್ಮ ಯೋಚನೆ ಮತ್ತು ಚೈತನ್ಯದಲ್ಲಿ ಶ್ರೇಷ್ಠತೆ ಹಾಗು ವಿವೇಚನೆಯಿಂದ ಕೂಡಿರುವ ಪ್ರಜೆಗಳನ್ನು ರೂಪಿಸಲಾಗುತ್ತದೆಯೇ ಹೊರತು ಅವರು ಕೇವಲ ಒಂದು ರಾಷ್ಟ್ರದಲ್ಲಿ ಹುಟ್ಟಿದ್ದಾರೆ ಎಂದಲ್ಲ. ಕುಟುಂಬ, ಧರ್ಮ, ಶಾಲೆಗಳು, ಸಮಾನಮನಸ್ಕ ಗುಂಪುಗಳು, ರಾಜಕೀಯ ಸಂಘಟನೆಗಳು, ಮಾಧ್ಯಮ ಇತ್ಯಾದಿ ಕೆಲವು ಸಂಸ್ಥೆಗಳು ನಮ್ಮ ದಿನನಿತ್ಯದ ಬದುಕಿನ ಮೇಲೆ ಪ್ರಭಾವವನ್ನು ಬೀರುತ್ತವೆ. ನಾವು ಸಾಮಾನ್ಯವಾಗಿ ರಾಷ್ಟ್ರೀಯತೆ, ಸಾರ್ವತ್ರಿಕ ವಯಸ್ಕ ಪೌರತ್ವ ಮತ್ತು ಚುನಾವಣೆಗಳು ಇತ್ಯಾದಿ ವಿಶಾಲ ರಾಜಕೀಯ ಚಿಂತನೆಗಳೊಂದಿಗೆ ಪೌರತ್ವದ ಪರಿಕಲ್ಪನೆಯನ್ನು ಕಾಣುತ್ತೇವೆ; ಆದರೆ ನಿಜಾರ್ಥದಲ್ಲಿ ನಾವು ನಮ್ಮ ಕುಟುಂಬಗಳಲ್ಲಿ ಮತ್ತು ನಮ್ಮ ಶಾಲೆಗಳಲ್ಲಿ ಜವಾಬ್ದಾರಿಯುತ ಸದಸ್ಯರಾಗುವುದನ್ನೇ ಮರೆಯುತ್ತೇವೆ. ಶಾಲೆಗಳಲ್ಲಿ ಅನುಸರಿಸುವ ಕೆಲವು ಪರಿಪಾಠಗಳಿಂದ ಉತ್ತಮ ಪ್ರಜೆಯ ಗುಣಗಳನ್ನು ಹೇಗೆ ಪೋಷಿಸಬಹುದು ಎಂಬುದರ ಮೇಲೆ ಈ ಲೇಖನವು ಬೆಳಕು ಚೆಲ್ಲುತ್ತದೆ.

ಪ್ರಜೆಗಳಾಗಿ ಮಕ್ಕಳ ವಿಕಸನ

ಇದು ಬಳ್ಳಾರಿ ಜಿಲ್ಲೆಯ ಸರ್ಕಾರಿ ಶಾಲೆಗಳ ಕಥೆ. ಇಲ್ಲಿ ಶಾಲಾ ಸಂಸತ್ತನ್ನು ರಚಿಸುವುದು ಸಾಮಾನ್ಯ ಪದ್ಧತಿಯಾಗಿದೆ. ಪ್ರತಿ ಮಗುವಿಗೆ ಇಲ್ಲೊಂದು ಪಾತ್ರವನ್ನು ನಿಯೋಜಿಸಲಾಗುತ್ತದೆ. ಅದರಂತೆ ಅವರು ಚರ್ಚೆ ಮಾಡಬಹುದು, ಸಂವಾದ ನಡೆಸಬಹುದು ಮತ್ತು ಶಾಲೆಗೆ ಸಂಬಂಧಿಸಿದ ಕೆಲಸಗಳನ್ನು ಜಾರಿಗೆ ತರಬಹುದು. ಆರೋಗ್ಯ ಸುರಕ್ಷಾ ಅಭಿಯಾನ ಎಂಬ ಯೋಜನೆಯ ಅಡಿಯಲ್ಲಿ ಇಲ್ಲಿನ ಶಾಲೆಗಳು ಅಜೀಂ ಪ್ರೇಮ್‌ಜಿ ಪ್ರತಿಷ್ಠಾನದ ಜೊತೆಗೆ ಕೆಲಸ ಮಾಡುತ್ತವೆ. ಇದರಿಂದಾಗಿ ಗ್ರಾಮ ಪಂಚಾಯತ್ ಗ್ರಂಥಾಲಯಗಳು ಈ ಯೋಜನೆಯಲ್ಲಿ ಕೈಜೋಡಿಸುವಂತಾಗಿದೆ. ಇದರ ಫಲವಾಗಿ ಗ್ರಾಮೀಣಾಭಿವೃದ್ಧಿ ಇಲಾಖೆ ಮತ್ತು ಗ್ರಾಮ ಪಂಚಾಯತಿಗಳು ಆರಂಭಿಸಿದ ಜಂಟಿ ಕಾರ್ಯಕ್ರಮ ಓದುವ ಬೆಳಕು. ಗ್ರಾಮೀಣ ಕರ್ನಾಟಕದ ಸಾರ್ವಜನಿಕ ಗ್ರಂಥಾಲಯಗಳಲ್ಲಿ ಮಕ್ಕಳನ್ನು ಓದು ಮತ್ತು ಕಲಿಕೆಯಲ್ಲಿ ತೊಡಗಿಸುವಂತೆ ಮಾಡುವುದು ಈ ಕಾರ್ಯಕ್ರಮದ ಉದ್ದೇಶ. ಇಂತಹ ಒಂದು ಕಾರ್ಯಕ್ರಮವು ನಮ್ಮ ಸಂವಿಧಾನಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಪಂಚಾಯತಿಗಳಿಗೆ ಒದಗಿಸುವ ಅವಕಾಶವನ್ನು ನಮಗೆ ನೀಡಿತು. ಇಂತಹ ಒಂದು ಕ್ರಮವು ನಮ್ಮ ಅನೇಕ ಮಂದಿ ಶಿಕ್ಷಕರಿಗೆ ಉತ್ತೇಜನಕಾರಿಯಾಗಿತ್ತು. ಹಾಗಾಗಿ ತಮ್ಮ ವಿದ್ಯಾರ್ಥಿಗಳಲ್ಲಿ ಪೌರತ್ವದ ಮೌಲ್ಯಗಳನ್ನು ತಿಳಿಸುವ ಅಂಶಗಳನ್ನು ಒಳಗೊಂಡ ಹೊಸ ಬೋಧನಾ ವಿಧಾನಗಳನ್ನು ವಿನ್ಯಾಸ ಮಾಡುವ ಅಪರೂಪದ ಅವಕಾಶವನ್ನು ಒದಗಿಸಿತು.

ಹೊಸಪೇಟೆಯ ಹೊಸೂರು ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕರಾದ ಮಂಜಪ್ಪ ಅವರು ಶಾಲಾ ಪಂಚಾಯತಿ ರಚಿಸುವ ಹೊಸ ಕಾರ್ಯಕ್ರಮವನ್ನು ಆರಂಭಿಸಿದರು. ವಿನೋಬಾ ಭಾವೆ ಕ್ಲಸ್ಟರ್‌ಗೆ ಸೇರಿದ ನಾನಾ ಶಾಲೆಗಳ ಮಕ್ಕಳನ್ನು ಒಳಗೊಂಡ ತಂಡವನ್ನು ರಚಿಸುವಲ್ಲಿ ಸಮರ್ಥರಾದ ಅವರು, ತಮ್ಮ ಸುತ್ತಮುತ್ತಲಿನ ಪ್ರದೇಶಗಳಲ್ಲಿ ತೆರೆದ ಚರಂಡಿ, ಸೋರುತ್ತಿರುವ ನಲ್ಲಿಗಳು, ಸಾರ್ವಜನಿಕ ಸ್ಥಳಗಳಲ್ಲಿ ಕಸಗಳನ್ನು ಸುರಿಯುತ್ತಿರುವುದು ಇತ್ಯಾದಿ ಅಂಶಗಳನ್ನು ಗಮನಿಸುವಂತೆ ಮಕ್ಕಳಿಗೆ ತಿಳಿಸಿದರು. ಮಕ್ಕಳು ಸಮುದಾಯದಿಂದ ಮಾಹಿತಿಯನ್ನು ಸಂಗ್ರಹಿಸಿದರು. ಇದು ಮಕ್ಕಳು, ಶಿಕ್ಷಕರು ಮತ್ತು ಪಂಚಾಯತಿ ಅಧಿಕಾರಿಗಳ ನಡುವೆ ಮಾತುಕತೆಗೆ, ಚರ್ಚೆಗೆ ದಾರಿ ಮಾಡಿಕೊಟ್ಟಿತು. ಇದು ಅವರಿಗೆ ಸ್ಥಳೀಯ ಆಡಳಿತ ವ್ಯವಸ್ಥೆಯನ್ನು ಅರ್ಥ ಮಾಡಿಕೊಳ್ಳಲು ಅವಕಾಶವನ್ನು ನೀಡಿದ್ದು ಮಾತ್ರವಲ್ಲದೆ, ತಮ್ಮ ಸುತ್ತ ಇರುವ ಸಮಸ್ಯೆಗಳನ್ನು ಅರಿತುಕೊಳ್ಳಲೂ ಸಾಧ್ಯವಾಯಿತು. ಪ್ರತಿಯೊಂದು ಮಗುವಿನ ಅಭಿಪ್ರಾಯವನ್ನು ಗೌರವ ಮತ್ತು ಘನತೆಯಿಂದ ಕಂಡಿದ್ದು ಬಹುಮುಖ್ಯ ಸಂಗತಿಯಾಗಿತ್ತು. ಬಳಿಕ ಅಧಿಕಾರಿಗಳ ಸಹಕಾರದೊಂದಿಗೆ ಶಾಲಾ ಆವರಣವನ್ನು ಸ್ವಚ್ಛ ಮಾಡಲು ಮತ್ತು ಸೋರುತ್ತಿರುವ ನಲ್ಲಿಗಳನ್ನು ದುರಸ್ತಿ ಮಾಡಲು ಮಕ್ಕಳು ತಮ್ಮಲ್ಲಿಯೇ ಸಂಘಟಿತರಾದರು.

ಚಿಂತನಶೀಲ ವೃತ್ತಿಪರರಾಗಿ ಮಕ್ಕಳು

ಕೂಡ್ಲಿಗಿ ತಾಲೂಕಿನ ಕೊಟ್ಟೂರಿನಲ್ಲಿರುವ ಅಂಬೇಡ್ಕರ್ ಕಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕರಾದ ಶಿವಕುಮಾರ್ ಮತ್ತು ಅಕ್ಕಮಹಾದೇವಿ ಅವರು ಒಂದು ಕಿರು ನಾಟಕವನ್ನು ರಚಿಸಿದರು. ಈ ನಾಟಕದಲ್ಲಿ ಮಕ್ಕಳನ್ನು ರೈಲ್ವೆ ನಿಲ್ದಾಣದ ಹಾಗು ಅಂಚೆ ಕಚೇರಿಯ ನೌಕರರಾಗಿ ಮತ್ತು ಸರ್ಕಾರಿ ಆಸ್ಪತ್ರೆಯಲ್ಲಿನ ವೈದ್ಯರಾಗಿ ಚಿತ್ರಿಸಲಾಗಿತ್ತು. ಈ ನಾಟಕವನ್ನು ಸಿದ್ಧಪಡಿಸುವಾಗ ಮಕ್ಕಳು ಆಸ್ಪತ್ರೆಯಲ್ಲಿನ ಸ್ವಚ್ಛತೆಯ ಅಂಶಗಳ ಬಗ್ಗೆ ಹೆಚ್ಚು ಗಮನ ಹರಿಸಿದರು. ಇದನ್ನು ಅಭಿನಯಿಸಿ ತೋರಿಸಿದ ಮಕ್ಕಳು ಆಸ್ಪತ್ರೆಗಳು ಸದಾ ಜನರಿಗೆ ಸಹಾಯ ಮಾಡಬೇಕು ಎಂಬ ಬಲವಾದ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಬಳಿಕ ಶಿಕ್ಷಕರು ಮಕ್ಕಳನ್ನು ಸ್ಥಳೀಯ ಆಸ್ಪತ್ರೆ ಮತ್ತು ರೈಲ್ವೆ ನಿಲ್ದಾಣಗಳಿಗೆ ಕರೆದುಕೊಂಡು ಹೋದರು ಮತ್ತು ತರಗತಿಯಲ್ಲಿ ತಾವು ಅಂದುಕೊಂಡಂತೆ ಈ ಸ್ಥಳಗಳು ಸ್ವಚ್ಛತೆಯಿಂದ ಕೂಡಿರದೇ ಇರುವುದನ್ನು ಕಂಡು ಮಕ್ಕಳು ಆಘಾತಕ್ಕೆ ಒಳಗಾದರು. ಈ ತಾಣಗಳನ್ನು ಸರಿಯಾಗಿ ಗಮನಿಸಿ ಇವುಗಳನ್ನು ಯಾಕೆ ಸ್ವಚ್ಛವಾಗಿ

ಇಡಲಾಗಿಲ್ಲ ಎಂಬುದನ್ನು ಯೋಚನೆ ಮಾಡುವಂತೆ ಶಿಕ್ಷಕರು ವಿದ್ಯಾರ್ಥಿಗಳಿಗೆ ತಿಳಿಸಿದರು. ಶಾಲೆಗೆ ಮರಳಿದ ವಿದ್ಯಾರ್ಥಿಗಳು ಕಂಡುಕೊಂಡ ಸತ್ಯ ಗಮನಾರ್ಹವಾಗಿತ್ತು; ಈ ಸ್ಥಳಗಳು ಯಾಕೆ ಸ್ವಚ್ಛವಾಗಿಲ್ಲ ಎಂದರೆ ಜನರಿಗೆ ಇವು ತಮ್ಮ ಸ್ವಂತದ್ದು ಎಂಬ ಜವಾಬ್ದಾರಿಯೇ ಬಂದಿಲ್ಲ, ಆಸ್ಪತ್ರೆ ಮತ್ತು ನಿಲ್ದಾಣ ತಮಗೆ ಸೇರಿದ್ದಲ್ಲ ಎಂದು ಜನರು ಭಾವಿಸಿದ್ದು ಕಾರಣವಾಗಿತ್ತು. ಇದು ಶಿಕ್ಷಕರಾದ ಶಿವಕುಮಾರ್ ಮತ್ತು ಅಕ್ಕಮಹಾದೇವಿ ಅವರಲ್ಲಿ ಹೊಸ ಚಿಂತನೆಯನ್ನು ಹುಟ್ಟು ಹಾಕಿತು. ಮಕ್ಕಳಿಗೆ ಈ ಶಾಲೆ ತಮ್ಮದು ಎನ್ನುವಂತೆ ಮಾಡಬೇಕು ಎಂಬ ಯೋಚನೆಗೆ ಅವರು ಚಾಲನೆಯನ್ನು ನೀಡಿದರು. ಮಕ್ಕಳು ಈ ಪರಿಕಲ್ಪನೆಯನ್ನು ಅರ್ಥ ಮಾಡಿಕೊಂಡಾಗ ನಿಜಕ್ಕೂ ಅಚ್ಚರಿ ಕಾದಿತ್ತು; ಅವರು ತಮ್ಮ ಶಾಲಾ ಆವರಣಗಳನ್ನು ಸ್ವಚ್ಛವಾಗಿಟ್ಟುಕೊಳ್ಳಲು ಆರಂಭಿಸಿದರು. ಅಷ್ಟು ಮಾತ್ರವಲ್ಲದೆ ತಮ್ಮ ಶಾಲಾ ಆವರಣದೊಳಗೆ ಕಸಗಳನ್ನು ಹಾಕದಿರುವಂತೆ ಹಿರಿಯರಿಗೂ ತಾಕೀತು ಮಾಡಿದರು. ಇಂತಹ ಮಾಲೀಕತ್ವದ ಪ್ರಜ್ಞೆ ಅವರನ್ನು ಅವರ ಶಾಲೆಗಳ ನಿಜವಾದ 'ನಾಗರಿಕ'ರನ್ನಾಗಿ ಮಾಡಿತು ಎಂಬುದು ವಿಶೇಷ.

ಕ್ಷೇತ್ರದಲ್ಲಿ ಪರಿಣಾಮಕಾರಿಯಾಗುವ ಬಗೆ

ಅಜೀಂ ಪ್ರೇಮ್‌ಜಿ ಫೌಂಡೇಷನ್ ನಡೆಸಿದ ಸಾಮಾಜಿಕ ವಿಜ್ಞಾನ ಕಾರ್ಯಾಗಾರದಲ್ಲಿ ಪಾಲ್ಗೊಂಡ ಬಳಿಕ, ನಾವು 'ಪೌರತ್ವ'ದ ಪರಿಕಲ್ಪನೆಯ ಬಗ್ಗೆ ಚರ್ಚೆ ಮಾಡುವ ಸಾಮರ್ಥ್ಯವನ್ನು ಪಡೆದೆವು. ಪೌರತ್ವದ ವಿಷಯದ ಬಗ್ಗೆ ಸ್ವಯಂಸೇವಕ ಶಿಕ್ಷಕ ವೇದಿಕೆ (Volunteer Teacher Forums (VTFs) ಇದನ್ನು ಏರ್ಪಡಿಸಿತ್ತು. ಬೇವೂರು ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕ ರವೀಂದ್ರ ಬಿ. ಅವರು ತರಗತಿಯಲ್ಲಿ ತಮ್ಮ ಬೋಧನಾ ವಿಧಾನದ ಬಗ್ಗೆ ಚರ್ಚಿಸುವುದನ್ನು ಆಯ್ಕೆ ಮಾಡಿಕೊಂಡರು. ಆರು ಮತ್ತು ಏಳನೇ ತರಗತಿಯ ಪೌರನೀತಿ ಪಠ್ಯಪುಸ್ತಕದಿಂದ ಸಾರ್ವಜನಿಕ ಆಸ್ತಿ ಕುರಿತ ಪಾಠವನ್ನು ಬೋಧಿಸುವ ಸಂದರ್ಭದಲ್ಲಿ ಅವರು ಕೆಲವು ಪ್ರಶ್ನೆಗಳನ್ನು ಕೇಳಿದರು; ಸಾರ್ವಜನಿಕರನ್ನು ಯಾರು ರೂಪಿಸುತ್ತಾರೆ? ಸಾರ್ವಜನಿಕ ಆಸ್ತಿ ಎಂದರೆ ಏನು? ತೆರಿಗೆದಾರ ಎಂದರೆ ಯಾರು? ಮಕ್ಕಳು ಈ ಎಲ್ಲ ಪ್ರಶ್ನೆಗಳ ಬಗ್ಗೆ ಚರ್ಚೆ ಮಾಡಿ ಈ ರೀತಿ ಉತ್ತರವನ್ನು ನೀಡಿದರು; ಎಲ್ಲರನ್ನೂ ಸೇರಿಸಿದರೆ ಮಾತ್ರ ಸಾರ್ವಜನಿಕರಾಗುತ್ತಾರೆ ಮತ್ತು ಎಲ್ಲರೂ ತೆರಿಗೆಯನ್ನು ಪಾವತಿ ಮಾಡಿದಾಗ ಅಂತಹ ಆಸ್ತಿಯು ಸಹಜವಾಗಿ ಎಲ್ಲರಿಗೆ ಸೇರಿದ್ದಾಗುತ್ತದೆ.

ಮರುದಿನ ಮಕ್ಕಳು ತಮ್ಮ ಶಿಕ್ಷಕರೊಡಗೂಡಿ ಶಾಲೆಯ ಸನಿಹದಲ್ಲಿಯೇ ಇರುವ ಸಾರ್ವಜನಿಕ ಬಸ್ ನಿಲ್ದಾಣಕ್ಕೆ ತೆರಳಿ ಸ್ವಚ್ಛತೆಯಲ್ಲಿ ಪಾಲ್ಗೊಂಡರು. ಅಷ್ಟು ಮಾತ್ರವಲ್ಲದೆ ಈ ಸ್ಥಳವು ಸಾರ್ವಜನಿಕರಿಗೆ ಸೇರಿದ್ದರಿಂದ ಇದನ್ನು ಸ್ವಚ್ಛವಾಗಿಟ್ಟುಕೊಳ್ಳುವಂತೆ ಅಲ್ಲಿದ್ದ ಜನರಲ್ಲಿಯೂ ಮನವಿ ಮಾಡಿಕೊಂಡರು. ಗ್ರಾಮದಲ್ಲಿ ಜನರು ಬೇವೂರು ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ಹಸುಗಳನ್ನು ಮೇಯಲು ಬಿಡುವುದು ಸಾಮಾನ್ಯವಾಗಿತ್ತು. ಇದರಿಂದಾಗಿ ಶಾಲೆಯ ಆವರಣದಲ್ಲಿ ಬೆಳೆದ ಗಿಡಗಳು ಮತ್ತು ಮರಗಳು ನಾಶವಾಗುತ್ತಿದ್ದವು. ಆದರೆ ಈ ಬಗ್ಗೆ ಒಳನೋಟಗಳು ದಕ್ಕಿದ ಬಳಿಕ ಶಾಲಾ ಅವಧಿಯ ಬಳಿಕವೂ ಶಾಲೆಯಲ್ಲಿಯೇ ಉಳಿದ ಮಕ್ಕಳು ಶಿಕ್ಷಕರ ಸಹಾಯದೊಂದಿಗೆ ಮರಗಳಿಗೆ ಬೇಲಿಯನ್ನು ಕಟ್ಟಿ ಮತ್ತು ಗೇಟಿಗೆ ಬೀಗ ಹಾಕಿ ಆಸ್ತಿಯನ್ನು ಸುಭದ್ರಗೊಳಿಸಿದರು. ಗ್ರಾಮಸ್ಥರು ತಮ್ಮ ಜಾನುವಾರುಗಳನ್ನು ಶಾಲಾ ಆವರಣದೊಳಕ್ಕೆ ಬಿಡುವುದನ್ನು ನಿಲ್ಲಿಸಿದರು.

ಓದುವ ಬೆಳಕು ಕಾರ್ಯಕ್ರಮದ ಅಂಗವಾಗಿ ಇದೇ ಶಿಕ್ಷಕರು ಮಕ್ಕಳನ್ನು ಸೇರಿಸಿ ಮಕ್ಕಳ ಗ್ರಾಮಸಭೆಯಲ್ಲಿ ಪಾಲಕರನ್ನು ಸೇರಿಸುವಲ್ಲಿ ಯಶಸ್ವಿಯಾದರು ಮತ್ತು ಮಕ್ಕಳ ಹಕ್ಕುಗಳ ಮಹತ್ವವನ್ನು ಪಾಲಕರಿಗೆ ವಿವರಿಸಿದರು. ಕುಟುಂಬದಲ್ಲಿ ನಿರ್ಧಾರಗಳನ್ನು ಕೈಗೊಳ್ಳುವಾಗ ಮಕ್ಕಳ ಜೊತೆ ಸಮಾಲೋಚನೆ ನಡೆಸುವ ಮಹತ್ವವನ್ನೂ ವಿವರಿಸಿದರು. ತಮ್ಮ ಮಕ್ಕಳ ಅನುಭವಗಳನ್ನು ಕೇಳುವಂತೆಯೂ ಅವರಿಗೆ ತಿಳಿಸಲಾಯಿತು. ಸಭೆಯಲ್ಲಿ ಸೇರಿದ್ದ ಪಾಲಕರು ಇದಕ್ಕೆ ಪೂರ್ಣ ಸಹಮತವನ್ನು ವ್ಯಕ್ತಪಡಿಸಿದರು ಮತ್ತು ತಮ್ಮ ಮಕ್ಕಳನ್ನು ಸಾರ್ವಜನಿಕ ಸಂಸ್ಥೆಗಳಾದ ಬ್ಯಾಂಕುಗಳು, ಪೊಲೀಸ್ ಠಾಣೆಗಳು ಮತ್ತು ಗ್ರಾಮ ಪಂಚಾಯತ್‌ಗಳಿಗೆ ಕರೆದೊಯ್ಯುವುದಾಗಿಯೂ ತಿಳಿಸಿದರು.

ಉಪಸಂಹಾರ

ಮಕ್ಕಳು ತಮ್ಮ ಹಕ್ಕುಗಳು ಮತ್ತು ಕರ್ತವ್ಯಗಳನ್ನು ಯೋಚನೆ ಮಾಡಿ ನಿರ್ವಹಿಸುವಂತೆ ಅವರನ್ನು ಸಮರ್ಥರನ್ನಾಗಿಸುವುದು ಪ್ರತಿಯೊಂದು ಶೈಕ್ಷಣಿಕ ಸಂಸ್ಥೆಗಳ ಗುರಿಯಾಗಬೇಕು. ನಮ್ಮ ಸಂವಿಧಾನವು ಪ್ರತಿಷ್ಠಾಪಿಸಿರುವ ಮೌಲ್ಯಗಳನ್ನು ಬೆಳೆಸಲು ಪ್ರತಿಯೊಂದು ಶಾಲೆಯೂ ಕೂಡ ಈ ರೀತಿಯ ಚಟುವಟಿಕೆಗಳನ್ನು ವಿನ್ಯಾಸಗೊಳಿಸಬೇಕು ಎಂಬುದು ನಮ್ಮ ಆಶಯವಾಗಿದೆ. ಇದು ಉತ್ತಮ ನಾಗರಿಕರನ್ನು ರೂಪಿಸುವ ಪ್ರಕ್ರಿಯೆಯಲ್ಲಿ ಸಹಾಯ–ಮಾಡುತ್ತದೆ ಮತ್ತು ಆಧುನಿಕ, ಪ್ರಜಾಸತ್ತಾತ್ಮಕ ರಾಷ್ಟ್ರದ ಸ್ಥಾಪಕರ ದೃಷ್ಟಿಕೋನಗಳನ್ನು ಕಾರ್ಯರೂಪಕ್ಕೆ ತರಲು ಸಾಧ್ಯವಾಗುತ್ತದೆ. ಆರಂಭದಲ್ಲಿ ಪ್ರಸ್ತಾಪಿಸಿದಂತೆ ರಾಷ್ಟ್ರಗಳನ್ನು ಕೇವಲ ರಚಿಸುವುದಲ್ಲ ಅವುಗಳನ್ನು ಕಟ್ಟಬೇಕಾಗುತ್ತದೆ. ಅದೇ ರೀತಿ ಉತ್ತಮ ನಾಗರಿಕರನ್ನು ನಾವು ರೂಪಿಸಬೇಕಾಗುತ್ತದೆ. ಸಮರ್ಪಕವಾದ ಮಾಹಿತಿಯೊಂದಿಗೆ ಅವರನ್ನು ಸಶಕ್ತಗೊಳಿಸುವುದು ಮತ್ತು ಆಧುನಿಕ, ಸಹಾನುಭೂತಿಯುಳ್ಳ ಹಾಗೂ ಉದಾರ ಮನೋಭಾವದ ನಾಗರಿಕನಾಗುವುದರಿಂದ ಇರುವ ಅನೇಕ ದೃಷ್ಟಿಕೋನಗಳ ಬಗ್ಗೆ ಶಿಕ್ಷಣ ನೀಡುವುದು ಸರ್ಕಾರಿ ಶಾಲೆಯ ಬಹುಮುಖ್ಯ ಗುರಿಗಳಲ್ಲಿ ಒಂದಾಗಬೇಕು.





ಅನಿಲ್ ಔಷಾ ಅಜೀಂ ಪ್ರೇಮ್‌ಜಿ ಫೌಂಡೇಷನ್‌ನಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಅಭಿವೃದ್ಧಿ ವಿಷಯದಲ್ಲಿ ಸ್ನಾತಕೋತ್ತರ ಪದವಿಯನ್ನು ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದಿಂದ ಪಡೆದಿದ್ದಾರೆ. ಓದುವುದು, ಅಡುಗೆ ಮಾಡುವುದು ಮತ್ತು ಸಿನಿಮಾಗಳನ್ನು ವೀಕ್ಷಿಸುವುದು ಅವರ ಹವ್ಯಾಸ. ಅವರನ್ನು ಈ ಮಿಂಚಂಚೆ ಮೂಲಕ ಸಂಪರ್ಕಿಸಬಹುದು: anil.ausha@azimpremjifoundation.org



ಸಂಜಯ್ ಡೇನಿಯಲ್ ಪುರಾತತ್ವಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿದ್ದಾರೆ. ಅವರು 2016ರಿಂದ ಸಹಾಯಕರಾಗಿ ಅಜೀಂ ಪ್ರೇಮ್‌ಜಿ ಫೌಂಡೇಷನ್‌ನಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಅವರನ್ನು ಈ ಮಿಂಚಂಚೆಯಲ್ಲಿ ಸಂಪರ್ಕಿಸಬಹುದು: sanjaydaniel1993@gmail.com

ಅನುವಾದ: **ಮಂಜುನಾಥ್ ಚಾಂದ್** । ಪರಿಶೀಲನೆ: **ನಾಗಮಣಿ ಎಸ್.ಎನ್.**